# ಹೊಸ ಬದುಕಿನ ದಿಡ್ಡಿಬಾಗಿಲು!

**ಸ್ಟಾರ್ ಸ್ಥಾನಮಾನದ ರೋಮಾಂಚನ. ಈಗ ಕಬಡ್ಡಿಯೂ ಶ್ರೀಮಂತ ಆಟ. ಇಲ್ಲಿದೆ ಪ್ರೊ ಕಬಡ್ಡಿಯಿಂದ ಕುಬೇರರಾದ ಮೂವರ ಕಥೆ!**

■ **ವಿಕ್ರಂ ಕಾಂತಿಕೆರೆ**




ಪ್ರಶಾಂತ್ ರೈ



ಲಕ್ಷ, ಕೋಟಿ ರೂಪಾಯಿಗಳಿಗೆ ಹರಾಜಾಗುವ ಕ್ರಿಕೆಟ್ ಆಟಗಾರರಂತೆ ಪ್ರೊ ಕಬಡ್ಡಿ ಲೀಗ್‌ನ ಆಟಗಾರರ ಹರಾಜು ಕ್ರೀಡಾಸಕ್ತರಲ್ಲಿ ಅಚ್ಚರಿ ಮೂಡಿಸಿದೆ. ಸ್ಟಾರ್ ರೈಡರ್‌ಗಳಾದ ನಿತಿನ್ ತೋಮರ್‌ಗೆ ₹ 93 ಲಕ್ಷ ಮತ್ತು ರೋಹಿತ್ ಕುಮಾರ್‌ಗೆ ₹ 81 ಲಕ್ಷ ಮೊತ್ತ ನಿಗದಿಯಾಗುವ ಮೂಲಕ ಕಬಡ್ಡಿಯೂ ಈಗ ಶ್ರೀಮಂತ ಆಟವಾಗಿದೆ.

ರೋಮಾಂಚನದ ಈ ಕ್ರೀಡೆ ಇವತ್ತು ಪ್ರೊ ಕಬಡ್ಡಿ ಸ್ವರೂಪದಲ್ಲಿ ಅಪಾರ ಹಣ ಗಳಿಸಿಕೊಡುತ್ತಿದೆ. ಆಟಗಾರರ ಬಾಳಿನ ದೀಪಕ್ಕೆ 'ಇಂಧನ'ದ ಮೂಲವಾಗುತ್ತಿದೆ. ಅವರ ಹೊಸಬದುಕಿಗೆ ದಿಡ್ಡಿಬಾಗಿಲು ತೆರೆದಿದೆ. ಮಣ್ಣಿನ ಅಂಕಣದಲ್ಲಿ ಹವ್ಯಾಸಕ್ಕಾಗಿ ಆಡುತ್ತಿದ್ದವರನ್ನು ವೃತ್ತಿಪರ ಆಟಗಾರರನ್ನಾಗಿ ಬೆಳೆಸಿದ ಪ್ರೊ ಕಬಡ್ಡಿ ಅನೇಕ ಆಟಗಾರರ ಆರ್ಥಿಕ ಬದುಕಿನ ದಿಕ್ಕನ್ನೇ ಬದಲಿಸಿದೆ. ಆ ಮೂಲಕ ಮನ್ನಣೆಯೂ ಎತ್ತರಕ್ಕೇರಿದೆ. ಕಬಡ್ಡಿಯಿಂದ ಬಂದ ಕೀರ್ತಿಗೆ ಉದ್ಯೋಗವೂ ಹುಡುಕಿಕೊಂಡು ಬರತೊಡಗಿದೆ. 'ಸುಂದರ ಮನೆ, ಸಮೃದ್ಧ ಜೀವನ ಮತ್ತಿತರ ಕನಸನ್ನು ಪ್ರೊ ಕಬಡ್ಡಿ ನನಸಾಗಿಸಿದೆ' ಎನ್ನುತ್ತಾರೆ ಆಟಗಾರರು.

ದೂರದ ಹರಿಯಾಣದ ಸೋನಿಪತ್ ಜಿಲ್ಲೆಯಿಂದ ಕರ್ನಾಟಕ, ನೆರೆಯ ತಮಿಳುನಾಡಿನ ಸೇಲಂನಿಂದ ಹಿಡಿದು ಇರಾನ್, ಕೊರಿಯಾ ಮುಂತಾದ ಹೊರಗಿನ ದೇಶದವರೆಗೂ ಪ್ರೊ ಕಬಡ್ಡಿಯ ಈ ಆರ್ಥಿಕ ಪ್ರಭಾವಳಿ ಪಸರಿಸಿದೆ. ಉತ್ತರ ಪ್ರದೇಶದ ನಿತಿನ್ ತೋಮರ್ ಮತ್ತು ಹರಿಯಾಣದ ರೋಹಿತ್ ಕುಮಾರ್‌ಗೆ ಅತ್ಯಧಿಕ ಮೊತ್ತ ತಂದುಕೊಟ್ಟ ಪ್ರೊ ಕಬಡ್ಡಿ ಕರ್ನಾಟಕದ ಜೀವಕುಮಾರ್‌ಗೆ ಅರ್ಧ ಕೋಟಿ ರೂಪಾಯಿ ಗಳಿಸಿಕೊಟ್ಟಿದೆ. ರಾಜ್ಯದ ಸುಖೇಶ್ ಹೆಗ್ಡೆ ಮತ್ತು ಅವರೊಂದಿಗೆ ಕಬಡ್ಡಿ ಆಡುತ್ತ ಬೆಳೆದ ಪ್ರಶಾಂತ್ ರೈ ಅವರ ಕೈಗೂ ಲಕ್ಷಗಟ್ಟಲೆ ಹಣದ ಚೀಲವನ್ನು ನೀಡಿದೆ. ಹೊಸದಾಗಿ ಪದಾರ್ಪಣೆ ಮಾಡಿದ ಭಟ್ಕಳದ ಹರೀಶ್ ನಾಯಕ್ ಅವರ ಬದುಕಿಗೆ 'ಬೆಲೆ' ನೀಡಿದೆ.

## ಗೋಧಿ, ಜೀರಿಗೆ ನಡುವೆ ಸಮೃದ್ಧ ಜೀವನ

ಪ್ರದೀಪ್ ನರ್ವಾಲ್ ಕುಸ್ತಿ ಮತ್ತು ಕಬಡ್ಡಿಗೆ ಹೆಸರಾಗಿರುವ ಹರಿಯಾಣದ ಸೋನಿಪತ್ ಜಿಲ್ಲೆಯ ನೌರಿನ್ನಾಳದಲ್ಲಿ ಜನಿಸಿದವರು, ಪಾದರಸದಂತೆ ಪಾದಚಲನೆ ಮಾಡಬಲ್ಲ 'ಸೂಪರ್' ರೈಡರ್. ಕಬಡ್ಡಿ ಆಡುವಂಥ ಪರಿಸರದಲ್ಲಿ ಬೆಳೆದವರು ಅವರು. ಅವರ ಊರಿನವರೇ 18 ಮಂದಿ ಪ್ರೊ ಕಬಡ್ಡಿಯಲ್ಲಿ ಆಡುತ್ತಿದ್ದಾರೆ. ಅವರೆಲ್ಲರಿಗೂ ಈಗ ಕಬಡ್ಡಿಯೇ ಜೀವ; ಜೀವನ. ನರ್ವಾಲ್ ಈಗ ಬಿಎ ವಿದ್ಯಾರ್ಥಿ. ಈ ವಯಸ್ಸಿನಲ್ಲೇ ಮನೆಗೆ ಆಧಾರವಾಗಲು ಅವರಿಗೆ ಸಾಧ್ಯವಾಗಿದೆ.

'ತಂದೆ ಹೊಲ ನೋಡಿಕೊಳ್ಳುತ್ತಿದ್ದಾರೆ. ಆದರೆ ಹಿಂದಿನಂತೆ ಈಗ ಕೃಷಿ ಮೇಲೆ ನಮ್ಮ ಬದುಕು ಅವಲಂಬಿತವಾಗಿಲ್ಲ. ಕಬಡ್ಡಿಯಿಂದಾಗಿ ಆರ್ಥಿಕ ಮತ್ತು ಸಾಮಾಜಿಕ ಬದುಕು ಸಂಪೂರ್ಣ ಬದಲಾಗಿದೆ' ಎನ್ನುತ್ತಾರೆ ಅವರು.

## ಬದುಕು ಕಟ್ಟಿಕೊಟ್ಟ ಆ ಸುಳ್ಳು

ಪುತ್ತೂರಿನ ಕೈಕಾರ ಗ್ರಾಮದವರಾದ ಪ್ರಶಾಂತ್ ರೈ ಈ ಬಾರಿಯ ಹೊಸ ತಂಡ ಹರಿಯಾಣ ಸ್ಟೀಲರ್ಸ್‌ನ ರೈಡಿಂಗ್ ವಿಭಾಗದ ಆಧಾರಸ್ತಂಭ. ಕಾಲೇಜು ಸೇರುವುದಕ್ಕಾಗಿ ಹೇಳಿದ 'ಸುಳ್ಳು' ಅವರನ್ನು ಕ್ರೀಡಾಪಟುವನ್ನಾಗಿಸಿತು. ಅದರಿಂದಲೇ ಉದ್ಯೋಗ ಲಭಿಸಿತು. ಪ್ರೊ ಕಬಡ್ಡಿ ಮೂಲಕ ಆರ್ಥಿಕ ಬಲ ತಂದುಕೊಟ್ಟಿತು. ಮೊದಲ ಮೂರು ಆವೃತ್ತಿಯಲ್ಲಿ ತೆಲುಗು ಟೈಟನ್ಸ್ ಪರ ಆಡಿದ ಅವರು ಕಳೆದ ಆವೃತ್ತಿಯಲ್ಲಿ ದಬಂಗ್ ದೆಲ್ಲಿ ತಂಡದಲ್ಲಿದ್ದರು. ಈ ಬಾರಿ ಹರಿಯಾಣ ಸ್ಟೀಲರ್ಸ್ ₹ 21 ಲಕ್ಷ ನೀಡಿ ಅವರನ್ನು ಪಡೆದುಕೊಂಡಿದೆ.